# ಕ್ಯಾಥರೀನ್ ಆತಿಥ್ಯ ಮರೆಯಲುಂಟೇ?

**ದೂರದ ಅಮೆರಿಕಕ್ಕೆ ಹೋಗಿ ಅಲ್ಲಿನ ಸ್ನೇಹಿತರ ಮನೆಯಲ್ಲಿ ಔತಣಕೂಟದಲ್ಲಿ ಭಾಗವಹಿಸಿ ಬಾಂಧವ್ಯ ಮೆರೆದದ್ದು ಸವಿನೆನಪುಗಳ ಸಾಲಿಗೆ ಸೇರಿಹೋಗಿದೆ. ವಿದೇಶೀಯರ ಆತಿಥ್ಯ ಎಂದೂ ಮರೆಯುವಂಥದ್ದಲ್ಲ.**

**■ ಜಿ. ನಾಗೇಂದ್ರ ಕಾವೂರು**



ನನ್ನ ಜೀವಮಾನದಲ್ಲಿ ವಿದೇಶ ಪ್ರಯಾಣ ಮಾಡುತ್ತೇನೆಂದು ಕನಸು ಮನಸಿನಲ್ಲೂ ಎಣಿಸಿರಲಿಲ್ಲ. ನನ್ನ ಮಗ ರಾಜೇಂದ್ರ ಬೆಂಗಳೂರಿನ ಪ್ರತಿಷ್ಠಿತ ಕಂಪೆನಿಯಲ್ಲಿ ಸಾಫ್ಟ್‌ವೇರ್ ಎಂಜಿನಿಯರ್ ಆಗಿ ಉದ್ಯೋಗ ಮಾಡುತ್ತಿದ್ದ. ಹೆಡ್ ಆಫೀಸ್ ಅಮೆರಿಕದ ಬಾಸ್ಟನ್‌ನಲ್ಲಿತ್ತು. ಆರು ತಿಂಗಳು ಅಲ್ಲೇ ಇದ್ದು ಪ್ರಾಜೆಕ್ಟ್ ವರ್ಕ್ ಮಾಡಲು ಕಂಪನಿಯಿಂದ ಕಳುಹಿಸಿದ್ದರು. ಒಂದು ತಿಂಗಳು ಕಳೆದ ನಂತರ ಮಗ ನನ್ನನ್ನು ಅಮೆರಿಕ ದೇಶಕ್ಕೆ ಬರಲು ಆಹ್ವಾನಿಸಿದ. ನಾನು ಸರಕಾರಿ ಉದ್ಯೋಗಿಯಾದ್ದರಿಂದ ಪಾಸ್‌ಪೋರ್ಟ್ ಹಾಗೂ ವೀಸಾ ಪಡೆದುಕೊಳ್ಳಲು ಅಷ್ಟೇನೂ ಕಷ್ಟವಾಗಲಿಲ್ಲ. ನಲವತ್ತೈದು ದಿನಗಳ ರಜೆ ಪಡೆದು ಬೋಸ್ಟನ್‌ಗೆ ಹೋಗಿ ಅನೇಕ ಪ್ರೇಕ್ಷಣೀಯ ಸ್ಥಳಗಳನ್ನು ವೀಕ್ಷಿಸಿದೆವು. ಬೋಸ್ಟನ್ ನಗರದ ವಾಲ್ತಾಮ್ ಪಟ್ಟಣದಲ್ಲಿರುವ 'ಹಯಾತ್ ಹೌಸ್' ಹೋಟೆಲ್‌ನಲ್ಲಿ ಉಳಿದುಕೊಂಡಿದ್ದೆವು. ಅಮೆರಿಕದ ಬಹುತೇಕ ಹೋಟೆಲ್‌ಗಳಲ್ಲಿ ತಮ್ಮ ಗ್ರಾಹಕರಿಗೆ ಬೆಳಿಗ್ಗೆ ಕಾಂಪ್ಲಿಮೆಂಟರಿ ಉಪಾಹಾರವನ್ನು ನೀಡುತ್ತಾರೆ. ಆದುದರಿಂದ ದಿನಾಲೂ ಬೆಳಿಗ್ಗೆ ಹೋಟೇಲ್‌ನಲ್ಲಿ ಉಪಾಹಾರ ಮಾಡುತ್ತಿದ್ದೆವು. ಮಧ್ಯಾಹ್ನ ಮತ್ತು ರಾತ್ರಿ ನಾವೇ ಅಡುಗೆ ತಯಾರಿಸಿಕೊಳ್ಳುತ್ತಿದ್ದೆವು.

ಬೋಸ್ಟನ್‌ನಲ್ಲಿ ಉದ್ಯೋಗ ಮಾಡುತ್ತಿದ್ದ ಆಸ್ಟ್ರೇಲಿಯಾ ದಂಪತಿಗಳಾದ ಕ್ಯಾಥರೀನ್ ಮತ್ತು ಲಾರೆನ್ಸ್ ನಾವಿದ್ದ ಹೋಟೆಲ್‌ನಲ್ಲೇ ಉಳಿದುಕೊಂಡಿದ್ದು, ಪ್ರತಿದಿನ ಉಪಾಹಾರ ಮಾಡುವ ಸಮಯದಲ್ಲಿ ಭೇಟಿಯಾಗುತ್ತಿದ್ದರು. ಕೆಲವೇ ದಿನಗಳಲ್ಲಿ ನಮ್ಮ ಸ್ನೇಹಿತರಾದರು. ಅದೇ ಹೋಟೆಲ್‌ನಲ್ಲಿ ಮ್ಯಾನೇಜರ್ ಆಗಿದ್ದ ಎರಿಕ್‌ನ ಪರಿಚಯವೂ ನಮಗಾಯಿತು. ಆತ ಇಟಲಿ ಪ್ರಜೆಯಾಗಿದ್ದು, ಹಲವು ವರ್ಷಗಳ ಕಾಲ ಅಮೆರಿಕದಲ್ಲಿ ಉದ್ಯೋಗ ಮಾಡಿ ಅಮೆರಿಕ ಪ್ರಜೆಯಾಗಿದ್ದ. ಭಾರತ ದೇಶದ ಸಂಸ್ಕೃತಿ, ಆಚಾರ ವಿಚಾರಗಳ ಬಗ್ಗೆ ತಿಳಿದುಕೊಳ್ಳಲು ಉತ್ಸುಕನಾಗಿದ್ದ. ಭೇಟಿಯಾದಾಗಲೆಲ್ಲಾ ಭಾರತದ ಬಗ್ಗೆ ಹಲವು ವಿಷಯಗಳನ್ನು ನಮ್ಮಿಂದ ಕೇಳಿ ತಿಳಿದುಕೊಳ್ಳುತ್ತಿದ್ದ. ನಾವು ತಯಾರಿಸುತ್ತಿದ್ದ ಭಾರತೀಯ ಶೈಲಿಯ ಆಹಾರ ಪದಾರ್ಥಗಳ ರುಚಿಯನ್ನೂ ಆತ ಮೆಚ್ಚಿಕೊಂಡಿದ್ದ.

ನಾವು ಅಮೆರಿಕದಿಂದ ಭಾರತಕ್ಕೆ ಹೊರಡಲು ಕೇವಲ ಒಂದು ವಾರ ಬಾಕಿಯಿರುವಾಗ, ಎರಿಕ್ ನಮಗೆ ಔತಣ ನೀಡಲು ನಮ್ಮೊಂದಿಗೆ ಲಾರೆನ್ಸ್ ದಂಪತಿಗಳನ್ನೂ ತನ್ನ ಮನೆಗೆ ಆಹ್ವಾನಿಸಿದರು. ನಾವು ಸಸ್ಯಾಹಾರಿಗಳೆಂದು ಮೊದಲೇ ತಿಳಿಸಿದ್ದೆವು.

ಎರಿಕ್ ಮನೆಯಿರುವುದು ನಮ್ಮ ಹೋಟೆಲ್‌ನಿಂದ ಸುಮಾರು 15 ಮೈಲಿ ದೂರವಿರುವ ಫ್ರೇಮಿಂಗ್ ಹ್ಯಾಮ್‌ನಲ್ಲಿ. ಅಮೆರಿಕನ್ನರು ಇತರರಿಂದ ಯಾವುದೇ ರೀತಿಯ ಉಡುಗೊರೆಗಳನ್ನು ಸ್ವೀಕರಿಸುವುದಿಲ್ಲವಂತೆ. ಹಾಗಾಗಿ ನಾವು ಬರಿಗೈಲಿ ಎರಿಕ್ ಮನೆಗೆ ಹೋಗಲು ಮನಸಾಗದೆ ಆತ ಬಹಳ ಇಷ್ಟಪಟ್ಟು ತಿನ್ನುವ ಬಿಸಿಬೇಳೇಭಾತ್ ಮಾಡಿಕೊಂಡು ಹೋಗಲು ತೀರ್ಮಾನಿಸಿದೆವು. ಬಿಸಿಬೇಳೇಭಾತ್ ಮಾಡಲು ಬೇಕಾಗುವ ತರಕಾರಿ ಹಾಗೂ ಇತರೆ ಸಾಮಗ್ರಿಗಳನ್ನು 'ವಾಲ್ತಾಮ್' ಪಟ್ಟಣದ ಮೋಡಿ ಸ್ಟ್ರೀಟ್‌ನಲ್ಲಿರುವ ಇಂಡಿಯಾ ಮಾರ್ಕೆಟ್‌ನಿಂದ ಖರೀದಿಸಿ ತಂದೆವು. ಸುಮಾರು 12 ಗಂಟೆ ಸಮಯವಾಗುವಷ್ಟರಲ್ಲಿ ಬಿಸಿಬೇಳೇಭಾತ್ ತಯಾರಾಯಿತು.

ನಾವು ರೆಡಿಯಾಗಿ ನನ್ನ ಮಗನ ಕಾರಿನಲ್ಲಿ 'ಫ್ರೇಮಿಂಗ್ ಹ್ಯಾಮ್' ತಲುಪುವಷ್ಟರಲ್ಲಿ ಮಧ್ಯಾಹ್ನ ಗಂಟೆ ಒಂದಾಗಿತ್ತು. ಎರಿಕ್ ನಮ್ಮನ್ನು ಆನಂದದಿಂದ ಬರಮಾಡಿಕೊಂಡು ಮಾವಿನಹಣ್ಣು ಜ್ಯೂಸ್ ನೀಡಿದರು. ಭಾರತೀಯರು ಯಾವ ಜ್ಯೂಸ್ ಇಷ್ಟಪಡುತ್ತಾರೆಂದು ಮಾಲ್ ಒಂದರಲ್ಲಿ ವಿಚಾರಿಸಿ, ಮಾವಿನ ಹಣ್ಣು ಖರೀದಿಸಿ ತಂದು ಸ್ವತಃ ಜ್ಯೂಸ್ ತಯಾರಿಸಿ ನಮಗೆ ನೀಡಿದರೆಂಬ ವಿಷಯ ತಿಳಿದು ಅಚ್ಚರಿಗೊಂಡೆವು.

ನಮ್ಮೊಂದಿಗೆ ಔತಣಕೂಟದಲ್ಲಿ ಭಾಗವಹಿಸಬೇಕಾಗಿದ್ದ ಆಸ್ಟ್ರೇಲಿಯಾದ ಕ್ಯಾಥರೀನ್ ಮತ್ತು ಲಾರೆನ್ಸ್ ದಂಪತಿಗಳು ಬರಲು ಅರ್ಧ ಗಂಟೆ ತಡವಾಗುತ್ತದೆಂದು ಎರಿಕ್ ತಿಳಿಸಿದರು. ಸ್ವಲ್ಪ ಸಮಯದಲ್ಲೇ ಕ್ಯಾಥರೀನ್ ದಂಪತಿಗಳು ಆಗಮಿಸಿದರು. ಎಲ್ಲರೂ ಸೇರಿ ಅಡುಗೆ ಮನೆಗೆ ಲಗ್ಗೆ ಹಾಕಿದೆವು. ಕ್ಯಾಥರೀನ್ ತಯಾರಿಸಿದ್ದ ರುಚಿಕರವಾದ ಲಸ್ಸಿಯನ್ನು ನಾವೆಲ್ಲರೂ ಕುಡಿದೆವು. ನಾವು ತಂದಿದ್ದ ಬಿಸಿ ಬೇಳೆಭಾತ್ ಒಟ್ಟಿಗೆ,ಭಾರತ ಅಡುಗೆಯ ಬಗ್ಗೆ ಅಲ್ಪಸ್ವಲ್ಪ ಗೊತ್ತಿದ್ದ ಲಾರೆನ್ಸ್ ತಯಾರಿಸಿದ್ದ ಅಡುಗೆಗಳನ್ನೂ ಒಪ್ಪ ಓರಣವಾಗಿ ಜೋಡಿಸಿದ್ದರು. ಚಪಾತಿ, ಅನ್ನ, ಎಣ್ಣೆ ಬದನೆಕಾಯಿ, ಕಾಳಿನ ಪಲ್ಯ ಸಲಾಡ್, ಹಪ್ಪಳ, ಮೊಸರು ಇವೆಲ್ಲವನ್ನೂ ನೋಡಿ ನಮಗೆ ಅಚ್ಚರಿಯಾಯಿತು. ಎರಿಕ್, ಲಾರೆನ್ಸ್, ಕ್ಯಾಥರೀನ್‌ರನ್ನು ನಿಲ್ಲಿಸಿ ಅಡುಗೆಯ ಫೋಟೊ ತೆಗೆದೆವು. ಎಲ್ಲರೂ ಸೇರಿ ಅವರವರಿಗೆ ಬೇಕಾದಷ್ಟು ಬಡಿಸಿಕೊಂಡು ತಿಂದೆವು. ಎಲ್ಲಾ ಪದಾರ್ಥಗಳೂ ರುಚಿಕರವಾಗಿದ್ದವು. ಒಂದೆರಡು ಗಂಟೆ ಲಾನ್ ನಲ್ಲಿ ಎಲ್ಲರೂ ಕುಳಿತು ಹರಟೆ ಹೊಡೆದೆವು.

ಸಂಜೆ ನಾಲ್ಕು ಗಂಟೆ ಆಗುತ್ತಿದ್ದಂತೆ ಎಲ್ಲರಿಗೂ ಧನ್ಯವಾದ ಸಮರ್ಪಿಸಿ ಹೊರಡಲು ಅನುವಾದೆವು. ಅವರ ಆತಿಥ್ಯವನ್ನು, ಸರಳತನವನ್ನು ನೋಡಿದ್ದ ನಾವು ಹೊರಡುವಾಗ ಭಾವುಕರಾಗಿದ್ದೆವು. ನಾವು ಅಮೆರಿಕದಿಂದ ಬಂದು ಸುಮಾರು ಎರಡು ವರ್ಷಗಳಾಗುತ್ತಿದ್ದರೂ, ಎರಿಕ್ ಮನೆಯ ಪರಿಸರ, ಔತಣ ಕೂಟ ನಮ್ಮ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿದಿದೆ. ದೇಶ ಯಾವುದಾದರೇನು ಪರಸ್ಪರ ಪ್ರೀತಿ ವಿಶ್ವಾಸಗಳೇ ಮನಸ್ಸಿನಲ್ಲಿ ಚಿರಕಾಲ ಉಳಿಯುತ್ತದೆ. ■